ವಿಷಯ:- ಸಿ.ಎಸ್. ಪುರ ಜೂನಿಯರ್ ಕಾಲೇಜಿಗೆ ಭೋಧಕರ ನೇಮಕಾತಿ.

340(2116) ಶ್ರೀ ಜಿ.ಎಸ್. ಶಿವನಂಜಪ್ಪ, (ಗುಬ್ಬಿ):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಬ್ಬಿ ಕ್ಷೇತ್ರದ ಸಿ.ಎಸ್. ಪುರದಲ್ಲಿರುವ ಜೂನಿಯರ್ ಕಾಲೇಜಿನಲ್ಲಿ ಯಾವ ಯಾವ ವಿಷಯಗಳಲ್ಲಿ ಬೋಧಕರು ಇರುವುದಿಲ್ಲ? ಮತ್ತು ಎಷ್ಟು ವರ್ಷಗಳಿಂದ ಸದರಿ ಹುದ್ದೆಗಳು ಖಾಲಿ ಇವೆ?

ಆ) ಈ ಬಗ್ಗೆ ಸಾರ್ವಜನಿಕರಿಂದ ಕಾಲೇಜಿನ ಪ್ರಿನ್ಸಿಪಾಲರಿಂದ ಮತ್ತು ಶಾಸಕರಿಂದ ಮನವಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈಗಲಾದರೂ ಸದರಿ ಬೋಧಕರ ಹುದ್ದೆಗಳಿಗೆ ನೇಮಕ ಮಾಡಲಾಗುವುದೇ? ಹಾಗೂ ಎಷ್ಟು ಅವಧಿಗಳಲ್ಲಿ ನೇಮಕ ಮಾಡಲಾಗುವುದು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ಗುಬ್ಬಿ ಕ್ಷೇತ್ರದ ಸಿ.ಎಸ್. ಪುರದ ಪದವಿಪೂರ್ವ ಕಾಲೇಜಿನಲ್ಲಿ ಈ ಕೆಳಕಂಡ ಉಪನ್ಯಾಸಕರ ಹುದ್ದೆಗಳು ಸುಮಾರು ಒಂದು ವರ್ಷದಿಂದ ಖಾಲಿ ಇವೆ. ಆಂಗ್ಲಭಾಷೆ–1: ಇತಿಹಾಸ–1: ರಾಜ್ಯ–ಶಾಸ್ತ್ರ–1.

ಆ) ಹೌದು.

ಇ) ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ 864 ಉಪನ್ಯಾಸಕರ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗವು ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಯುತ್ತಿದ್ದು ಆಯ್ಕೆ ಪಟ್ಟಿ ಬಂದ ತಕ್ಷಣ ಖಾಯಂ ಆಗಿ ನೇಮಕಾತಿ ಮಾಡುವ ಕ್ರಮ ಕೈಗೊಳ್ಳಲಾಗುವುದು. ಅಲ್ಲಿಯವರೆವಿಗೆ ಸಮೀಪದ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರನ್ನು ತಾತ್ಕಾಲಿಕವಾಗಿ ವಾರಕ್ಕೆ 3 ದಿನ ನಿಯೋಜಿಸಲಾಗುತ್ತಿದೆ.

ಶ್ರೀ ಜಿ.ಎಸ್. ಶಿವನಂಜಪ್ಪ:- ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ಗುಬ್ಬಿ ಕ್ಷೇತ್ರದ ಸಿ.ಎಸ್. ಪುರದಲ್ಲಿರುವ ಜೂನಿಯರ್ ಕಾಲೇಜಿನಲ್ಲಿ ಯಾವ ಯಾವ ವಿಷಯಗಳಲ್ಲಿ ಬೋಧಕರು ಇರುವುದಿಲ್ಲ ಮತ್ತು ಎಷ್ಟು ವರ್ಷಗಳಿಂದ ಸದರಿ ಹುದ್ದೆಗಳು ಖಾಲಿ ಇವೆ ಎಂಬುದರ ಬಗ್ಗೆ ಕೇಳಿರುವುದು. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಆಂಗ್ಲಭಾಷೆ–1, ಇತಿಹಾಸ–1, ರಾಜ್ಯಶಾಸ್ತ್ರ–1 ಹುದ್ದೆಗಳು ಒಂದು ವರ್ಷದಿಂದ ಖಾಲಿ ಇವೆ ಎಂದು ಹೇಳಿದ್ದಾರೆ. ಎರಡನೇ ಪ್ರಶ್ನೆ, ಈ ಬಗ್ಗೆ ಸಾರ್ವಜನಿಕರಿಂದ ಕಾಲೇಜಿನ ಪ್ರಿನ್ಸಿಪಾಲರಿಂದ ಮತ್ತು ಶಾಸಕರಿಂದ ಮನವಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಎಂದರೆ ಹೌದು ಎಂದು ಹೇಳುತ್ತಿದ್ದಾರೆ. ಈ ಮನವಿ ಬಂದ ಮೇಲೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿರಿ? ಆ ಶಾಸಕರಿಗೆ ಆಗಲೀ ಪ್ರಿನ್ಸಿಪಾಲರಿಗೆ ಆಗಲೀ, ಸಾರ್ವಜನಿಕರಿಗಾಗಲೀ ಏನಾದರೂ ಉತ್ತರವನ್ನು ನೀವು ಕಳುಹಿಸಿದ್ದೀರಾ? ಅಧ್ಯಕ್ಷರೇ, ಅಲ್ಲಿ ಸುಮಾರು ಎರಡು ವರ್ಷಗಳಿಂದ ಈ ಹುದ್ದೆಗಳು ಖಾಲಿ ಇವೆ. ಈ ವರ್ಷ 45 ಜನ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದರೆ ಕೇವಲ ಒಬ್ಬ

ಮಾತ್ರ ಪಾಸು ಮಾಡಿದ್ದಾನೆ. ಇದಕ್ಕೆ ಯಾರು ಹೊಣೆ? ಇದಕ್ಕೆ ಜವಾಬ್ದಾರಿ ಯಾರಾಗಬೇಕು? ಇದಕ್ಕೆ ಏನಾದರೂ ನಷ್ಟವನ್ನು ಆ ಪೋಷಕರಿಗೆ ಆಗಲೀ, ವಿದ್ಯಾರ್ಥಿಗಳಿಗಾಗಲಿ ಯಾವ ವಿಧಾನದಲ್ಲಾದರೂ ನೀವು ತುಂಬುವುದಕ್ಕೆ ಸಾಧ್ಯವೇ? ಇಲ್ಲದಿದ್ದರೆ, ಇದಕ್ಕೆ ಯಾರು ಹೊಣೆ? ದಯಮಾಡಿ ಮಂತ್ರಿಗಳು ಇದಕ್ಕೆ ಉತ್ತರವನ್ನು ಕೊಡಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೇ, ಆಲ್ಲಿ ಹುದ್ದೆಗಳು ಖಾಲಿ ಇರತಕ್ಕಂಥದ್ದು ನಿಜ. ಪದವಿಪೂರ್ವ ಕಾಲೇಜುಗಳಲ್ಲಿ ಉಪಾಧ್ಯಾಯರಿಲ್ಲದೆ ಎಲ್ಲಿ ತೊಂದರೆಯಾಗಿದೆ ಅಂತಹ ಕಡೆ ಹತ್ತಿರದಲ್ಲಿರತಕ್ಕ ಉಪಾಧ್ಯಾಯರನ್ನು ನಿಯೋಜನೆ ಮಾಡತಕ್ಕಂಥ ದೃಷ್ಟಿಯಲ್ಲಿ ಪರಿಹಾರ ಮಾಡುತ್ತಿದ್ದೇವೆ. ಆದನ್ನು ಸ್ನೇಹಿತರು ನನ್ನ ಹತ್ತಿರ ಎರಡು ಸಾರಿ ಬಂದು ಅಲ್ಲಿ ಉಪಾಧ್ಯಾಯರ ಕೊರತೆ ಇದೆ ಆದಷ್ಟು ಜಾಗ್ರತೆ ನೇಮಕ ಮಾಡಬೇಕೆಂದು ಹೇಳಿದ್ದಾರೆ. ನಿಯೋಜನೆ ಮಾಡುವುದಕ್ಕೆ ನಾವು ತಾತ್ಕಾಲಿಕವಾಗಿ ಆದೇಶವನ್ನು ಕೊಟ್ಟಿದ್ದೇವೆ. ಈಗ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಖಾಲೀ ಇರುವ 864 ಉಪನ್ಯಾಸಕರ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆ ಪಟ್ಟಿ ಬಂದಿದ್ದು ಇನ್ನು ಒಂದು ತಿಂಗಳೊಳಗೆ 864 ಉಪನ್ಯಾಸಕರ ನೇಮಕಾತಿಯಾಗುತ್ತದೆ ಅವರನ್ನೆಲ್ಲಾ ಎಲ್ಲೆಲ್ಲಿ ಖಾಲಿ ಇದೆ ಅಲ್ಲಿಗೆ ಪೋಸ್ಟ್ ಮಾಡಿಕೊಂಡು, ಸ್ನೇಹಿತರು ಏನು ಹೇಳುತ್ತಿದ್ದಾರೆ ಅವುಗಳನ್ನು ಸಹ ಭರ್ತಿ ಮಾಡತಕ್ಕಂಥ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಜಿ.ಎಸ್. ಶಿವನಂಜಪ್ಪ:- ಸುಮಾರು ಎರಡು ವರ್ಷಗಳಿಂದ ಪ್ರಿನ್ಸಿಪಾಲರು, ಸಾರ್ವಜನಿಕರು ಹಾಗೂ ನಾನೂ ಸಹಿತ ತಮಗೆ, ತಮ್ಮ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸುತ್ತಾ ಬಂದ್ದಿದ್ದೇವೆ. ಈಗ ಬೇರೆ ಬೇರೆ ಕಾಲೇಜಿನಲ್ಲಿ ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ ಅಥವಾ ಇನ್ಯಾವುದೇ ರೂಪದಲ್ಲಿ ಎರವಲು ಸೇವೆ ಮೂಲಕ ಏಕೆ ಹಾಕಿಕೊಡಲಿಕ್ಕೆ ಆಗಲಿಲ್ಲ? ಈಗ ಎರಡು ವರ್ಷಗಳಿಂದ ವಿದ್ಯಾರ್ಥಿಗಳಿಗೆ ಆಗಿರತಕ್ಕ ನಷ್ಟವನ್ನು ತುಂಬುವುದಾದರೂ ಹೇಗೆ? ಅವರು ಬಂದು ನಮ್ಮ ಮನೆಯ ಮುಂದೆ ಕುಳಿತಿದ್ದಾರೆ. ಈ ಮೂರು ವಿಷಯಗಳಲ್ಲಿ ಯಾರು ಅನುತ್ತೀರ್ಣರಾಗಿದ್ದಾರೆ ಇವರಿಗೆ ನೀವು ಏನಾದರೂ ಮಾಡಲಿಕ್ಕೆ ಅವಕಾಶ ಇದೆಯಾ ಅಥವಾ ಏನಾದರೂ ಮಾಡಲಿಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೀರಾ ಎಂಬುದು ನನ್ನ ಪ್ರಶ್ನೆ. ಎರಡನೆಯದಾಗಿ, ಮೂರನೆಯ ಪ್ರಶ್ನೆಗೆ 864 ಜನ ಉಪನ್ಯಾಸಕರ ಹುದ್ದೆ ಖಾಲಿ ಇದೆ, ಈ ಬಗ್ಗೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ನಾವು ಪ್ರಸ್ತಾಪನೆ ಕಳುಹಿಸಿದ್ದೇವೆ. ಆಲ್ಲಿ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ ಎಂದು ಉತ್ತರದಲ್ಲಿ ತಿಳಿಸಿದ್ದೀರಿ. ಈಗಾಗಲೇ ಸಿ.ಎಸ್. ಪುರದಲ್ಲಿ ಜ್ಯೂನಿಯರ್ ಕಾಲೇಜ್ ಪ್ರಾರಂಭವಾಗಿ 2–3 ತಿಂಗಳು ಆಗುತ್ತಾ ಬಂತು. ಮತ್ತೆ ಈ ವರ್ಷವೂ ಅದೇ ಸ್ಥಿತಿಯನ್ನು ಮುಂದುವರೆಸುತ್ತೀರಾ ಹೇಗೆ ಅಥವಾ ಆ ಕಾಲೇಜಿನಲ್ಲಿರತಕ್ಕ ವಿದ್ಯಾರ್ಥಿಗಳನ್ನು ಬೇರೆ ಕಾಲೇಜಿಗಾದರೂ ಕಳುಹಿಸಿ ಏನಾದರೂ ಸಹಾಯ ಮಾಡಲಿಕ್ಕೆ ಸಾಧ್ಯವೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೇ, ಉಪಾಧ್ಯಾಯರುಗಳ ಕೊರತೆ ಇರತಕ್ಕಂಥದ್ದು ಸಾರ್ವತ್ರಿಕವಾಗಿ ನಮ್ಮೆಲ್ಲಾ ಸ್ನೇಹಿತರಿಗೂ ಗೊತ್ತಿರುವಂಥದ್ದು. ಕೊರತೆ ಇದೆ ಎಂದು ಹೇಳಿ ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಅದನ್ನು ಭರ್ತಿ ಮಾಡತಕ್ಕಂಥ ದೃಷ್ಟಿಯಲ್ಲಿ ಸರ್ಕಾರ ವ್ಯವಸ್ಥೆ ಮಾಡಿದೆ. 864 ಉಪನ್ಯಾಸಕರನ್ನು ನೇಮಕಮಾಡತಕ್ಕಂಥ ವಿಷಯದಲ್ಲಿ ಈಗಾಗಲೇ ತೀರ್ಮಾನವಾಗಿದೆ, ನೇಮಕಾತಿಯೂ ಕೂಡ ಆಗುತ್ತದೆ. ಸದ್ಯ ಇನ್ನು ಒಂದು, ಒಂದೂವರೆ ತಿಂಗಳಿನಲ್ಲಿ ಈ ಎಲ್ಲಾ ನೇಮಕಾತಿಗಳು ಆಗುತ್ತದೆ. ತಾವೇನು ಹೇಳುತ್ತಿದ್ದೀರಿ ಆ ಕಾಲೇಜಿನಲ್ಲಿಯೂ ಸಹ ಉಪನ್ಯಾಸಕರನ್ನು ಭರ್ತಿ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಜಿ.ಎಸ್. ಶಿವನಂಜಪ್ಪ:- ಅಧ್ಯಕ್ಷರೇ, ನಾನು ಎರಡು ವರ್ಷಗಳಿಂದಲೂ ಈ ಕುರಿತಂತೆ ಮನವಿಯನ್ನು ಕೊಡುತ್ತಲೇ ಬಂದಿದ್ದೇನೆ. ಗುತ್ತಿಗೆ ಆಧಾರದ ಮೇಲೆ ಆಗಲೀ ಅಥವಾ ಎರವಲು ಸೇವೆಯ ಮೇಲಾದರೂ ಆಗಲೀ ಹಾಕಲಿಕ್ಕೆ ಸರ್ಕಾರಕ್ಕೆ ಏನು ತೊಂದರೆಯಾಗಿತ್ತು? ನಗರದಲ್ಲಿ ಜಾಸ್ತಿ ಜನ ಉಪನ್ಯಾಸಕರು ಇರುತ್ತಾರೆ. ಅಂತಹ ಕಡೆಯೋ ಅಥವಾ ಪಕ್ಕದಲ್ಲಿರತಕ್ಕ ಕಾಲೇಜುಗಳಿಂದ ಎರವಲು ಆಗಲೀ ಅಥವಾ ಗುತ್ತಿಗೆ ಆಧಾರದ ಮೇಲೆ ಏತಕ್ಕೆ ತೆಗೆದುಕೊಳ್ಳಬಾರದು?

ಅಧ್ಯಕ್ಷರು:- ಈಗ ಶಿವನಂಜಪ್ಪನವರೇ, ಎರಡು ವರ್ಷಗಳ ಹಿಂದೆ ಏಕೆ ಮಾಡಲಿಲ್ಲ ಎಂಬ ಬಗ್ಗೆ ಇವರು ಹೇಗೆ ಉತ್ತರವನ್ನು ಹೇಳುವುದು; ಇವ್ಹೊತ್ತು ಏನು ಮಾಡುತ್ತಾರೆ, ಅದರ ಬಗ್ಗೆ ಉತ್ತರವನ್ನು ಹೇಳುತ್ತಾರೆ.

ಶ್ರೀ ಜಿ.ಎಸ್. ಶಿವನಂಜಪ್ಪ:- ಹಾಗಲ್ಲ ಸಾರ್, ಇವ್ಹೊತ್ತಿನ ಪರಿಸ್ಥಿತಿ ಏನಾಗಿದೆ, 40 ಜನ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಕುಳಿತು ಒಬ್ಬ ಮಾತ್ರ ಪಾಸಾಗಿದ್ದಾನೆ. ಇನ್ನುಳಿದ 39 ಜನರ ಗತಿ ಏನಾಗಬೇಕು. ಇವರುಗಳು ಈ ಮೂರು ವಿಷಯಗಳಲ್ಲಿ ಮಾತ್ರವೇ ಅನುತ್ತೀರ್ಣರಾಗಿರುವುದು. ಈಗಲಾದರೂ ಗುತ್ತಿಗೆ ಆಧಾರದ ಮೇಲಾದರೂ ಆಗಲೀ ಅಥವಾ ಎರವಲು ಆಧಾರದ ಮೇಲೆ ಭರ್ತಿ ಮಾಡಲಿಕ್ಕೆ ಸಾಧ್ಯವಿಲ್ಲವೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಹೆಚ್ಚಿಗೆ ಉಪನ್ಯಾಸಕರು ಪಕ್ಕದ ಕಾಲೇಜುಗಳಲ್ಲಿ ಇದ್ದರೆ ಅವರು ಹೇಳಿದಂತೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಅಷ್ಟೇ ಜನ ಇದ್ದರೆ ಆ ಮಕ್ಕಳಿಗೂ ತೊಂದರೆಯಾಗುತ್ತದೆ. ಅದನ್ನೂ ನಾವು ಯೋಚನೆ ಮಾಡಬೇಕು. ಅವರಿಗೂ ತೊಂದರೆಯಾಗಬಾರದು, ಇವರಿಗೂ ತೊಂದರೆಯಾಗಬಾರದು, ಒಂದು ವೇಳೆ ಹೆಚ್ಚುವರಿ ಉಪಾಧ್ಯಾಯರು ಇದ್ದರೆ ಅಲ್ಲಿ ತಾತ್ಕಾಲಿಕವಾಗಿ ನೇಮಕ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಜಿ.ಎಸ್. ಶಿವನಂಜಪ್ಪ:- ಇದಕ್ಕೆ ಎರಡು ವರ್ಷಗಳಿಂದ ಡೆಪ್ಯುಟೇಷನ್ ಮಾಡುವಂತಹ ಪ್ರಯತ್ನ ಅಥವಾ ಕಂಟ್ರಾಕ್ಟ್ ಬೇಸಿಸ್ ಮೇಲೆ ಏನಾದರೂ ಅಪಾಯಿಂಟ್ ಮಾಡುವುದಕ್ಕೆ ಸರ್ಕಾರ ಏನಾದರೂ ಪ್ರಯತ್ನ ಮಾಡಿದೆಯೇ ಇದರ ಬಗ್ಗೆ ಶಾಸಕರು ಪತ್ರ ಬರೆದರೆ ಯಾರಿಂದಲೂ ಪತ್ರ

ಬರುವುದಿಲ್ಲ. ಈ ರೀತಿಯಾದರೆ ಏಕೆ ಈ ಸಂಸ್ಥೆಗಳನ್ನು ನಡೆಸಬೇಕು ಎಂಬುದು ನನ್ನ ಪ್ರಶ್ನೆಯಾಗಿದೆ, ಮತ್ತು ಸಾರ್ವಜನಿಕರು ಈ ಸರ್ಕಾರಿ ಕಾಲೇಜುಗಳಿಗೆ ಏತಕ್ಕೆ ಸೇರಿಸಬೇಕು? ಲಕ್ಷಾಂತರ ರೂಪಾಯಿ ಗಳನ್ನು ಖರ್ಚು ಮಾಡಿ ಬಿಲ್ಡಿಂಗ್ ಸಹಿತ ಮಾಡಲಾಗಿದೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಶಿವನಂಜಪ್ಪನವರು ನನ್ನ ಬಳಿಗೆ ಎರಡು ಸಾರಿ ಬಂದು ಹೇಳಿದ್ದಾರೆ ಮತ್ತು ಅಲ್ಲಿನ ಪ್ರಿನ್ಸಿಪಾಲರೂ ಸಹಿತ ಇದರ ಬಗ್ಗೆ ಬರೆದಿದ್ದಾರೆ. ಅಲ್ಲಿ ಪಕ್ಕದ ಕಾಲೇಜಿನ ಉಪನ್ಯಾಸಕರನ್ನು ಈಗಾಗಲೇ ಅಲ್ಲಿ ನಿಯೋಜಿಸಲಾಗಿದೆ. ಹಾಗೆ ನಿಯೋಜಿಸಿರುವಂಥಾದ್ದು ಅವರಿಗೂ ಗೊತ್ತಾಗುವುದಿಲ್ಲ. ನನಗೂ ಗೊತ್ತಾಗುವುದಿಲ್ಲ. ಅಧಿಕಾರಿಗಳಿಗೆ ನಿಯೋಜಿಸಿ ಎಂದು ಹೇಳಿದ ಮೇಲೆ ಅವರು ನಿಯೋಜಿಸಿದ್ದಾರೆ. ಬಹುಶಃ ಅವರು ಮಾಡಲಿಲ್ಲವೆಂದರೆ ನೀವು ನಾಳೆ ದಯಮಾಡಿ ನನಗೆ ತಿಳಿಸಿ, ಅಲ್ಲಿ ನಿಯೋಜಿಸುವಂತಹ ಅವಶ್ಯಕತೆ ಇದೆ. ಮೂರು ಜನ ಉಪನ್ಯಾಸಕರು ಇಲ್ಲವೆಂದರೆ, ಪಾಠ ಕೇಳುವಂತಹ ಮಕ್ಕಳಿಗೆ ಅನಾನುಕೂಲವಾಗಿದೆ ಎಂಬ ಬಗ್ಗೆ ನಮಗೂ ಚಿಂತನೆ ಇದೆ. ಈಗ 864 ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುತ್ತೇವೆ. ಅದನ್ನು ಆದಷ್ಟು ಜಾಗ್ರತೆ ಮಾಡಿಕೊಡಿ ಎಂದು ಕೇಳಿದ್ದೇವೆ. ತಮಗೂ ಗೊತ್ತಿದೆ, ಅದು ಬಂದಮೇಲೆ ಅವರ ಇನ್‌ಕಂ ಸರ್ಟಿಫಿಕೇಟ್ ಕೊಡುವುದು ತಡವಾಗುತ್ತದೆ, ಕಮ್ಯುನಿಟಿ ಸರ್ಟಿಫಿಕೇಟ್ ಕೊಡುವುದು ತಡವಾಗುತ್ತದೆ. ಈ ಎಲ್ಲಾ ವ್ಯವಸ್ಥೆಯನ್ನು ನೋಡಿಕೊಂಡು ಮಾಡುವುದರಿಂದ ತಡವಾಗಿದೆಯೇ ಹೊರತು ಇನ್ನಾವುದೇ ರೀತಿಯಲ್ಲಿ ಉದಾಸೀನ ಮಾಡಿ ಮಕ್ಕಳಿಗೆ ತೊಂದರೆಯಾಗುವಂತಹ ಭಾವನೆಯಿಂದ ಈ ಕೆಲಸವನ್ನು ಮಾಡುತ್ತಿಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ:- ಮಾನ್ಯ ಅಧ್ಯಕ್ಷರೇ, ಈಗ ಕಾಲೇಜುಗಳು ಪ್ರಾರಂಭವಾಗಿ ಮೂರು ತಿಂಗಳಾಯಿತು. ಈ ವರ್ಷವಾದರೂ ಟೆಂಪರರಿಯಾಗಿ ಯಾವುದಾದರೂ ಒಂದು ಯೋಜನೆಯೊಳಗೆ ಈ ಉಪನ್ಯಾಸಕರನ್ನು ನೇಮಕ ಮಾಡಲು ಸಾಧ್ಯವೇ?

MR. SPEAKER:- You are a very senior Member. ಈಗ ಪಿ.ಎಸ್.ಸಿ.-ಯಿಂದ 864 ಜನರ ಇಂಟರ್‌ವ್ಯೂ ಮಾಡಿ ಕ್ಲಿಯರ್ ಮಾಡಿದ್ದಾರೆ. ಅವರ testimonials verify ಮಾಡುತ್ತಾ ಇದ್ದಾರೆ. ಅವರ ಕ್ಯಾಸ್ಟ್ ಸರ್ಟಿಫಿಕೇಟ್, ಇನ್‌ಕಂ ಸರ್ಟಿಫಿಕೇಟ್ ಎಲ್ಲವನ್ನೂ ನೋಡಬೇಕು. They are on the process of recruiting those people.

ಶ್ರೀ ಜಿ.ಎಸ್. ಶಿವನಂಜಪ್ಪ:- ಮಾನ್ಯ ಅಧ್ಯಕ್ಷರೇ, ಎರಡು ವರ್ಷಗಳಿಂದ ಮೂರು ಸಬ್ಜೆಕ್ಟ್‌ಗೆ ಸರ್ಕಾರದವರು ಯಾವುದೇ ಪ್ರಯತ್ನವನ್ನು ಮಾಡಿಲ್ಲ.

ಅಧ್ಯಕ್ಷರು:- ಇದು ಇಡೀ ರಾಜ್ಯದ ಸಮಸ್ಯೆಯಾಗಿದೆ. ಇದು ಸಿ.ಎಸ್. ಪುರದಲ್ಲಿ ಮಾತ್ರ ಸಮಸ್ಯೆಯಾಗಿಲ್ಲ. ನನ್ನ ಕ್ಷೇತ್ರದಲ್ಲೂ ಗೌನ್‌ಪಲ್ಲಿ ಎನ್ನುವ ಊರಿನಲ್ಲಿ ಎಲ್ಲರೂ ತಮ್ಮ ಮಕ್ಕಳನ್ನು ಟಿ.ಸಿ. ತೆಗೆದುಕೊಂಡು ಕರೆದುಕೊಂಡು ಹೋಗಿದ್ದಾರೆ. ಇದಕ್ಕೆ ಏನು ಮಾಡುವುದಕ್ಕಾಗುತ್ತದೆ? ಈ ಸರ್ಕಾರಿ ಸೇವೆಯಲ್ಲಿರುವಂತಹ ಶಿಕ್ಷಕರು ಬಹುತೇಕ ಮಂದಿ ಅವರು ಕೆಲಸಕ್ಕೆ ಸೇರುವುದು ಕಾಲೇ-

ಜುಗಳಲ್ಲಿ ಕೆಲಸ ಮಾಡುವುದಕ್ಕಲ್ಲ. ಅವರ ಅನುಕೂಲಕ್ಕಾಗಿ; ಅವರಿಗೆ ಬೇಕಾದಂತಹ ಊರಿಗೆ ಹೋಗುವುದಕ್ಕೆ ನಮ್ಮ ಹತ್ತಿರ ಬರುತ್ತಾರೆ. ಆ ಕೆಲಸವನ್ನು ನಾವೇ ಮಾಡುತ್ತೇವೆ.

ಶ್ರೀ ಜಿ.ಎಸ್. ಶಿವನಂಜಪ್ಪ:- ಆ ತರಹ ಬಂದಿದ್ದರೆ ನಾನೇ ಸಾಲ್ವ್ ಮಾಡುತ್ತಾ ಇದ್ದೆ. ಆದರೆ ಈ ಎರಡು ವರ್ಷಗಳಲ್ಲಿ ಯಾವುದೇ ಪ್ರಯತ್ನ ಆಗಿಲ್ಲ. ಇನ್ನಾದರೂ ಆಲ್ಟರ್‌ನೇಟಿವ್ ವ್ಯವಸ್ಥೆಯನ್ನು ಮಾಡಬೇಕಲ್ಲವೇ?

ಅಧ್ಯಕ್ಷರು:- ಮಾಡುತ್ತಾರೆ. He has been sincerely doing it.

ಶ್ರೀ ಬಿ. ರಮಾನಾಥ ರೈ:- ಈಗ ಉಪನ್ಯಾಸಕರ ಹುದ್ದೆಗಳು ಖಾಲಿ ಇರುವಂಥಾದ್ದು ಇದೆ. ನನ್ನ ಜಿಲ್ಲೆಯ ಜೂನಿಯರ್ ಕಾಲೇಜ್‌ನಲ್ಲಿ ಒಂದು ಸಮಸ್ಯೆ ಇದೆ. ಅಲ್ಲಿ ಒಬ್ಬರು ಅರ್ಥಶಾಸ್ತ್ರ ಉಪನ್ಯಾಸಕರು ಗೈರು ಹಾಜರಿಯಾಗಿ 5 ವರ್ಷಗಳಾಯಿತು. ನಾನು ಅದನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಕನ್ನಡ, ಇತಿಹಾಸ, ಇಂಗ್ಲೀಷ್, ರಾಜಕೀಯ ಶಾಸ್ತ್ರ, ಇವೆಲ್ಲಾ ಹುದ್ದೆಗಳು ಖಾಲಿ ಇವೆ. ಅಲ್ಲಿ ಇವರುಗಳು ಎಂದಾದರೂ ಬರಬಹುದೆಂಬ ವಿಶ್ವಾಸವಿದೆ. ಆದರೆ ಒಬ್ಬ ಅರ್ಥಶಾಸ್ತ್ರದ ಉಪನ್ಯಾಸಕರು ಗೈರು ಹಾಜರಿಯಾಗಿ 5 ವರ್ಷಗಳಾಗಿದೆ. ಅವರ ಮೇಲೆ ಯಾವ ಕ್ರಮವನ್ನು ಕೈಗೊಳ್ಳುತ್ತಾ ಇಲ್ಲ. ಅಲ್ಲಿ ಇನ್ನೊಬ್ಬರನ್ನು ಹಾಕುವಂತಹ ಅವಕಾಶವು ಆಗುವುದಿಲ್ಲ. ಅಂದರೆ ಈಗಾಗಲೇ ಆ ಉಪನ್ಯಾಸಕರು ಲೆಕ್ಕಕ್ಕೆ ಇದ್ದಾರೆ.

ಅಧ್ಯಕ್ಷರು:- ಅದರ ಬಗ್ಗೆ ಡೀಟೈಲ್ ಕೊಡಿ, ಅವರು ಯಾರು ಅವರನ್ನು ತಕ್ಷಣ ಸರ್ವಿಸ್‌ನಿಂದ ಡಿಸ್‌ಮಿಸ್ ಮಾಡಲಿ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮಾನ್ಯ ಸದಸ್ಯರು ಅಲ್ಲಿ 5 ವರ್ಷಗಳಿಂದ ಉಪನ್ಯಾಸಕರು ಇಲ್ಲವೆಂದು ಹೇಳಿದ್ದಾರೆ. ಈಗ ನಾನು ಒಂದೂವರೆ ವರ್ಷದಿಂದ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೇನೆ. ಇದರ ಬಗ್ಗೆ ಏನು ಎಂಬುದು ಗೊತ್ತಿಲ್ಲ. ಮಾನ್ಯ ಸ್ನೇಹಿತರು ನನಗೆ ಮೊದಲೇ ಹೇಳಿದ್ದರೆ ಉಪನ್ಯಾಸಕರನ್ನು ಹತ್ತಿರದಲ್ಲೇ ಯಾರಾದರೂ ಇದ್ದಿದ್ದರೆ ಅವರನ್ನೂ ಕೂಡಲೇ ನೇಮಕ ಮಾಡಿಕೊಡುತ್ತಿದ್ದೆ.

ಅಧ್ಯಕ್ಷರು:- ಇದೊಂದೇ ಸೌಕರ್ಯ ಸರ್ಕಾರದಲ್ಲಿರುವುದರಿಂದ you are answerable for the Government. The Government is continuous.

ಶ್ರೀ ಬಿ. ರಮಾನಾಥ್ ರೈ:- ನಾನು ಆ ಸರ್ಕಾರ, ಈ ಸರ್ಕಾರವೆಂದು ಹೇಳುವುದಿಲ್ಲ.

ಅಧ್ಯಕ್ಷರು:- ನೀವು ಆ ವಿಚಾರದಲ್ಲಿ ನಿಷ್ಪಕ್ಷಪಾತವಾಗಿ ಇದ್ದೀರಿ ಬಿಡಿ.

ಶ್ರೀ ಬಿ.ಆರ್. ಯಾವಗಲ್:- ಮಾನ್ಯ ಅಧ್ಯಕ್ಷರೇ, ಈಗ ಉಪನ್ಯಾಸಕರ ಹುದ್ದೆಗಳನ್ನು ತುಂಬಲಿಕ್ಕೆ ತಾವು ಕ್ರಮಗಳನ್ನು ತೆಗೆದುಕೊಂಡಿದ್ದೀರಿ. ಆದಷ್ಟು ಬೇಗ ತಾವು ಈ ಉಪನ್ಯಾಸಕರ ಹುದ್ದೆಗಳನ್ನು ತುಂಬುತ್ತಿದ್ದೀರಿ. ಆ ಉಪನ್ಯಾಸಕರುಗಳು ಗ್ರಾಮೀಣ ಪ್ರದೇಶಗಳಲ್ಲಿ ಇರುವಂತಹ ಜೂನಿಯರ್

ಕಾಲೇಜುಗಳಲ್ಲಿ ಕಡ್ಡಾಯವಾಗಿ ಸೇವೆ ಮಾಡಲು ಕಳುಹಿಸುವಂಥಾದ್ದಕ್ಕೆ ತಾವು ಏನಾದರೂ ಕಾನೂನಿನ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೀರೋ?

ಅಧ್ಯಕ್ಷರು:- ಮಾನ್ಯ ಗೋವಿಂದೇಗೌಡರೇ, ಗ್ರಾಮೀಣ ಪ್ರದೇಶಗಳಲ್ಲಿ ಕಡ್ಡಾಯವಾಗಿ ಉಪನ್ಯಾಸಕರು ಕೆಲಸ ಮಾಡಲು ಏನಾದರೂ ನಿರ್ಬಂಧ ಮಾಡುತ್ತಿರೋ? ಇವತ್ತು ಎಲ್ಲಾ ಡಾಕ್ಟರ್‌ಗಳು ಟೀಚರ್ಸ್‌ಗಳು ಇವರದೆಲ್ಲಾ ಇದೇ ಸಮಸ್ಯೆಯಾಗಿದೆ. ಸೆಲೆಕ್ಷನ್ ಆದನಂತರ ಇವರೆಲ್ಲರೂ ಎಲ್. ಹೆಚ್.ಗೆ ಬರುತ್ತಾರೆ.

ಶ್ರೀ ಹೆಚ್.ಜಿ ಗೋವಿಂದೇಗೌಡ:- ಈಗ ಉಪನ್ಯಾಸಕರನ್ನು ಏನು ನೇಮಕ ಮಾಡಿದ್ದೇವೆ, ಅವರಲ್ಲಿ ನೂರಕ್ಕೆ ನೂರರಷ್ಟು ಹಳ್ಳಿಗಳಿಗೆ ಹೋಗಬೇಕೆಂದು ಕಡ್ಡಾಯವಾಗಿ ಎಲ್ಲಾ ಹಳ್ಳಿಗಳಿಗೆ ಕಳುಹಿಸಿದ್ದೇವೆ. ಈಗಲೂ ಸಹ ಹಳ್ಳಿಗಳಲ್ಲಿರುವಂತಹ ಶಾಲೆಗಳಿಗೆ ಮಾನ್ಯ ಸದಸ್ಯರು ಹೇಳಿದಂತೆ ಉಪಧ್ಯಾಯರುಗಳನ್ನು ಏನು ನೇಮಕ ಮಾಡುತ್ತಿದ್ದೇವೆ, ಅವರೆಲ್ಲರೂ ಹಳ್ಳಿಗಳಲ್ಲಿ ಕೆಲಸ ಮಾಡಬೇಕು.

ಅಧ್ಯಕ್ಷರು:- ನಾನು, if it is not out of the way, ತಮಗೆ ಏನು ಸಜೆಷನ್ ಮಾಡುತ್ತೇನೆಂದರೆ ಪಿ.ಎಸ್.ಸಿ.ಯವರ ಕಡೆಯಿಂದ ವೈಟಿಂಗ್ ಲಿಸ್ಟ್ ಅನ್ನು ತೆಗೆದುಕೊಂಡು ಇಟ್ಟುಕೊಳ್ಳಿ. ಆರ್ಡ್‌ರ್ಸಗಳನ್ನು ತೆಗೆದುಕೊಂಡು ಎಲ್.ಹೆಚ್.ಗೆ ಬಂದು ಅಲ್ಲಿ ಹಾಕಿಸಿ, ಇಲ್ಲಿ ಹಾಕಿಸಿ ಎಂದು ಓಡಾಡುವಂತಹರಿಗೆ 8–10 ದಿವಸಗಳು ಟೈಮ್ ಕೊಡಿ, ಈ ಡೇಟ್‌ನಲ್ಲಿ ರಿಪೋರ್ಟ್ ಮಾಡಿಕೊಳ್ಳದಿದ್ದರೆ ಅವರ ಹೆಸರನ್ನು ತೆಗೆದುಹಾಕಿ; ವೈಟಿಂಗ್ ಲಿಸ್ಟ್‌ನಲ್ಲಿ ಇರುವವರಿಗೆ ಆರ್ಡ್‌ರ್ಸ್ ಕೊಡಿ ಆ ರೀತಿ ಮಾಡುವುದರಿಂದ ಎಲ್.ಹೆಚ್.ಗೆ ಬರುವುದನ್ನು ತಪ್ಪಿಸಿದ ಹಾಗೆ ಆಗುತ್ತದೆ, ಮತ್ತು ಸದಸ್ಯರುಗಳೂ ಕೂಡ ನೆಮ್ಮದಿಯಿಂದ ಬದುಕಬಹುದು.

ಶ್ರೀ ಸಿ. ಚೆನ್ನಿಗಪ್ಪ:- ಮಾನ್ಯ ಅಧ್ಯಕ್ಷರೇ, ತ್ಯಾಮಗೊಂಡ್ಲು ಗೌವರ್ನ್‌ಮೆಂಟ್ ಕಾಲೇಜಿನಲ್ಲಿ ಎರಡು ವರ್ಷಗಳಿಂದ ಇಂಗ್ಲೀಷ್ ಲೆಕ್ಚರರ್ ಇಲ್ಲ. ಮಾನ್ಯ ಮಂತ್ರಿಯವರು ಆ ಕಾಲೇಜಿಗೆ ಇಂಗ್ಲೀಷ್ ಲೆಕ್ಚರರ್ ಅನ್ನು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಪಬ್ಲಿಕ್ ಸರ್ವಿಸ್ ಕಮೀಷನ್‌ನಿಂದ ಬಂದ ನಂತರ ತಕ್ಷಣ ಮಾಡಿಸಿ ಕೊಡುತ್ತೇನೆ.

ವಿಷಯ:- ವಿಟ್ಲದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆಸ್ಪತ್ರೆಯನ್ನಾಗಿ ಪರಿವರ್ತಿಸುವುದು.

341(1914) **ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):-** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಟ್ಲ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆಸ್ಪತ್ರೆಯನ್ನಾಗಿ ಮಾಡಲು ಬೇಕಾದ ಅನುಕೂಲಗಳಿರುವುದು ನಿಜವಲ್ಲವೇ?